ದಿನಾಂಕಃ 17.08.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀಸವಾಲುಃ 1 ನೇ ಎದುರುದಾರರ ಪರ ಶ್ರೀ. ಬಿ ಎನ್ ಸಿ ವಕೀಲರಿಂದಃ</u>**

ಬೈಕ ನಂಬರ KA 49/y—3417 ನೇದ್ದು ನನ್ನ ಮಗ ಶಿವಾನಂದ ಲಗಮಪ್ಪ ಕಳಸನ್ನವರ ಇತನ ಹೆಸರಲ್ಲಿ ಇರುತ್ತದೆ. ಆತ ಅಪಘಾತದಲ್ಲಿ ಮೃತಪಟ್ಟಿರುತ್ತಾನೆ. ಸದರಿ ಬೈಕು ಇನ್ನೂ ದುರಸ್ತಿಯಾಗಿರುವುದಿಲ್ಲ. ಸದರಿ ಬೈಕನ ಆರ್ ಸಿ ಯಲ್ಲಿ ಆತನ ಹೆಸರು ಮುಂದುವರೆದಿರುತ್ತದೆ. ಅಪಘಾತದ ಸಮಯದಲ್ಲಿ ಸದರಿ ಬೈಕ್ ಗೆ ವಿಮೆ ಚಾಲ್ತಿಯಲ್ಲಿತ್ತು. ಸದರಿ ವಿಮಾ ಕಂಪನಿಯನ್ನು ಪ್ರಸ್ತುತ ಪ್ರಕರಣದಲ್ಲಿ ಪಕ್ಷಗಾರರನ್ನಾಗಿ ಮಾಡಲು ತೊಂದರೆ ಇರುವುದಿಲ್ಲ ಎಂದರೆ ನಿಜ. ಸದರಿ ವಿಮಾ ಕಂಪನಿಯಿಂದ ಪರಿಹಾರ ಪಡೆಯಲು ತೊಂದರೆ ಇರುವುದಿಲ್ಲ ಎಂದರೆ ನಿಜ.

ಅಪಘಾತದ ಕುರಿತು ದೂರನ್ನು ನನ್ನ ಮಗ ಮುತ್ತುರಾಯ ಕಳಸನ್ನವರ ಇತನು ನೀಡಿರುತ್ತಾನೆ. ನನ್ನ ಮಗ ಶಿವಾನಂದ ಮದ್ಯ ಸೇವನೆ ಮಾಡಿಚಿ ಲೈಸನ್ಸ ಹೊಂದದೇ ಬೈಕ ಚಲಾಯಿಸುತ್ತಿದ್ದ ಎಂದು ಆತನ ವಿರುದ್ಧವೂ ಸಹ ಪೊಲೀಸರು ದೋಷಾರೋಪಣಾ ಪತ್ರ ಸಲ್ಲಿಸಿರುತ್ತಾರೆಂದರೆ ನಿಜ.

ಮುಖ್ಯ ಅರ್ಜಿಗೆ ಮತ್ತು ಮುಖ್ಯ ವಿಚಾರಣೆಯ ಪ್ರಮಾಣಪತ್ರಕ್ಕೆ ನಾನೇ ಮಾಹಿತಿ ಕೊಟ್ಟಿರುತ್ತೇನೆ. ಸದರಿ ಅರ್ಜಿ ಮತ್ತು ಪ್ರಮಾಣಪತ್ರದಲ್ಲಿರುವ ಸಂಗತಿಗಳು ನನಗೆ ತಿಳಿದಿರುತ್ತವೆ. ಅಪಘಾತದ ದಿನ ನನ್ನ ಮಗ ಮದ್ಯಪಾನ ಸೇವಿಸಿ ಬೈಕ ಚಲಾಯಿಸಿಕೊಂಡು ಹೋಗಿ ಎದುರಿಗೆ ಬರುತ್ತಿದ್ದ ಟ್ರ್ಯಾಕ್ಟರ ಗೆ ಡಿಕ್ಕಿ ಪಡಿಸಿ ಅಪಘಾತಪಡಿಸಿದ್ದು, ಆತನ ತಪ್ಪಿ ನಿಂದ ಸಂಭವಿಸಿರುತ್ತದೆಂದರೆ ಸರಿಯಲ್ಲ. ಸದರಿ ಅಪಪಘಾತಕ್ಕೆ ಟ್ರ್ಯಾಕ್ಟರ ಚಾಲಕನ ಯಾವುದೇ ತಪ್ಪು ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಅಪಘಾತ ನನ್ನ ಮಗನ ತಪ್ಪಿನಿಂದ ಸಂಭವಿಸಿರುವುದರಿಂದ ಎದುರುದಾರನು ಪರಿಹಾರ ಕೊಡಲು ಬಾದ್ಯಸ್ಥರಾಗಿರುವುದಿಲ್ಲ ಎಂದರೆ ಸರಿಯಲ್ಲ.

ಅಪಘಾತದ ದಿನ ನನ್ನ ಮಗ ಮದ್ಯಪಾನ ಸೇವಿಸಿ, ಲೈಸನ್ಸ ಇಲ್ಲದೇ ಬೈಕನ್ನು ಚಲಾಯಿಸಿಕೊಂಡು ಅಪಘಾತಪಡಿಸಿರುತ್ತಾನೆಂದು ಹೇಳಿದರೆ ಪರಿಹಾರ ಸಿಗುವುದಿಲ್ಲ ಎಂದು ತಿಳಿದು ಟ್ರ್ಯಾಕ್ಟರ ಚಾಲಕನ ವಿರುದ್ಧ ಸುಳ್ಳು ದೂರನ್ನು ನೀಡಿರುತ್ತೇವೆ ಎಂದರೆ ಸರಿಯಲ್ಲ.

ಅಪಘಾತವಾದ ನಂತರ ಬೈಕು ಮತ್ತು ಟ್ರ್ಯಾಕ್ಟರಗೆ ಏನು ಜಖಂಗಳು ಆಗಿರುತ್ತವೆ ಎನ್ನುವ ಬಗ್ಗೆ ಆರ್.ಟಿ.ಒ ರವರು ಪರೀಕ್ಷೆ ಮಾಡಿ ವರದಿ ಮಾಡಿರುತ್ತಾರೆಂದರೆ ನಿಜ. ನನ್ನ ಮುಖ್ಯ ಅರ್ಜಿಯಲ್ಲಿ ಹಾಗೂ ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿ ಬೈಕ್‌ಗೆ ಏನು ಜಖಂಗಳು ಆಗಿರುತ್ತವೆ ಎನ್ನುವ ಬಗ್ಗೆ ನಿಖರವಾಗಿ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ಆರ್.ಟಿ.ಒ ರವರ ವರದಿಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಿಪಿ.10 ರಲ್ಲಿ ತೋರಿಸಿರುವಂತೆ ನಿಪಿ.5 ರಲ್ಲಿ ಇರುವ ವರದಿಯಲ್ಲಿ ಬೈಕ್‌ಗೆ ಯಾವುದೇ ಜಖಂಗಳು ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಬೈಕ್ ಅಪಘಾತವಾಗಿರುವುದರ ಪ್ರಯೋಜನ ಪಡೆದುಕೊಂಡು ಬೈಕನ ಎಲ್ಲಾ ಭಾಗಗಳನ್ನು ಬದಲಾವಣೆ ಮಾಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ.10 ರಲ್ಲಿ ತೋರಿಸಿರುವ ಬೈಕ ನ ಭಾಗಗಳು ಅಪಘಾತದಲ್ಲಿ ಜಖಂಗೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಎದುರುದಾರರು ನಾವು ಕೇಳಿದಂತೆ 80 ಸಾವಿರ ಗಳನ್ನು ಪರಿಹಾರ ನೀಡಲು ಬಾದ್ಯಸ್ಥರಾಗಿರುವುದಿಲ್ಲ ಎಂದರೆ ಸರಿಯಲ್ಲ.

ಅಪಘಾತದ ಸಮಯದಲ್ಲಿ ಬೈಕನ್ನು ಖರೀದಿಸಿ 04 ವರ್ಷಗಳಾಗಿದ್ದವು. ಸದರಿ ಬೈಕನ್ನು ನಾವು 1,20,000/- ರೂ.ಗಳಿಗೆ ಖರೀದಿಸಿದ್ದೇವು. ಅಪಘಾತದ ಸಮಯದಲ್ಲಿ ಸದರಿ ಬೈಕನ ವಿಮೆ ಚಾಲ್ತಿಯಲ್ಲಿತ್ತು. ಪ್ರತಿವರ್ಷ ಪ್ರತಿಶತ 10 ರಂತೆ

ಬೈಕನ ಮೌಲ್ಯ ಕಡಿಮೆಯಾಗುತ್ತಾ ಹೋಗುತ್ತದೆಂದರೆ ನಿಜ. ಬೈಕನ ವಿಮಾ ಪಾಲಸಿಯನ್ನು ಹಾಜರುಪಡಿಸಲು ತೊಂದರೆ ಇರುವುದಿಲ್ಲ. ಸದರಿ ಅಪಘಾತವು 1 ನೇಎದುರುದಾರನ ತಪ್ಪಿ ನಿಂದ ಸಂಭವಿಸದೇ ಇರುವುದರಿಂದ 2 ನೇ ಎದುದರುದಾರ ಪರಿಹಾರ ನೀಡಲು ಬಾದ್ಯ ಸ್ಥನಾಗಿರುವುದಿಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ- 1 ನೇ ಎದುರುದಾರರ ಪರ ಶ್ರೀ. ಆರ್ ಬಿ ಕೆ ವಕಿಲರಿಂದಃ-**

ಬೈಕ ನಂಬರ KA 49/y—3417 ನೇದ್ದನ್ನು ಚಿನ್ಮಯಿ ಶೋರೂಂನಲ್ಲಿ ಖರೀದಿಸಿರ್ದ್ದೇವು. ಖರೀದಿಸುವ ಕಾಲಕ್ಕೆ ಟಾಟಾ ಎ. ಐ. ಜೆ ಕಂಪನಿಯ ವಿಮೆ ಮಾಡಿಸಿದ್ದೇವು. ಅಪಘಾತದ ಸಮಯದಲ್ಲಿ ಸದರಿ ಬೈಕನ ವಿಮೆ ಚಾಲ್ತಿಯಲ್ಲಿತ್ತು. ಸದರಿ ಮೇಲೆ ಹೇಳಿದ ಚಿನ್ಮಯಿ ಶೋರೂಂನಲ್ಲಿ ಬೈಕನ್ನು ದುರಸ್ತಿಗೆ ಬಿಟ್ಟಿರುತ್ತೇವೆ. ಶೋರೂಂನವರಿಗೆ ಸದರಿ ಬೈಕನ ವಿಮೆ ಚಾಲ್ತಿಯಲ್ಲಿದ್ದು, ಕ್ಲೇಮ ಮಾಡಿಸಿಕೊಡುವಂತೆ ಕೇಳಿರುವುದಿಲ್ಲ. ಸದರಿ ಅಪಘಾತ ನ ನ್ನ ಮಗನ ತಪ್ಪಿ ನಿಂದ ಸಂಭವಿಸಿದ್ದು, ಆ ಕಾರಣಕ್ಕಾಗಿ ವಿಮಾ ಪರಿಹಾರ ಕೊಡಲು ಬರುವುದಿಲ್ಲ ಎಂದು ಹೇಳಿದ್ದರಿಂದ ನಾವು ಎದುರುದಾರರ ವಿರುದ್ಧ ಸದರಿ ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಪ್ರಸ್ತುತ ಪ್ರಕರಣದಲ್ಲಿ ಬೈಕನ ವಿಮಾ ಕಂಪನಿಯವರನ್ನು ಪಕ್ಷಗಾರರನ್ನಾಗಿ ಮಾಡಲು ತೊಂದರೆ ಇರುವುದಿಲ್ಲ ಎಂದರೆ ನಿಜ. ಸದರಿ ಅಪಘಾತ ಸಂಪೂರ್ಣವಾಗಿ ನನ್ನ ಮಗನ ತಪ್ಪಿ ನಿಂದ ಸಂಭವಿಸಿರುವುದರಿಂದ ಎದುರುದಾರರು ಯಾವುದೇ ರೀತಿಯಾದ ಪರಿಹಾರ ನೀಡಲು ಬಾದ್ಯಸ್ಥರಾಗಿರುವುದಿಲ್ಲ ಎಂದರೆ ಸರಿಯಲ್ಲ. ಪರಿಹಾರ ಪಡೆಯುವ ಸಲುವಾಗಿ ನಿಜ ಸಂಗತಿಗಳನ್ನು ಮರೆಮಾಚಿ ಖೊಟ್ಟಿ ಪ್ರಕರಣ ದಾಖಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**<u>ಮರುವಿಚಾರಣೆಃ</u>** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ ರೀತಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ

(ಮಹಾದೇವ ಕಾನಟ್ಟಿ)
1ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ